# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಆರಕೆರೆ ಉಪ ವಿಭಾಗದ ವಾರ್ಡ್ ಸಂಖ್ಯೆ 187 ಪುಟ್ಟೇನಹಳ್ಳಿ

## ಕಛೇರಿಯಲ್ಲಿ ದಿನಾಂಕ 26.04.2022 ರಂದು ನಡೆದ ಸಭೆಯ ನಡವಳಿಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪಾಲಿಕೆ ವಾರ್ಡ್ ಹಂತದಲ್ಲಿ ಸಮಿತಿಗಳನ್ನು ರಚಿಸುವ ಸಲುವಾಗಿ ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿ.ಆರ್/35/2022, ದಿನಾಂಕ 04.04.2022 .ರ ಆದೇಶದಲ್ಲಿ ವಾರ್ಡ್‌ನ ನೋಡೆಲ್ ಅಧಿಕಾರಿಯನ್ನಾಗಿ ಶ್ರೀ ರವಿ.ಡಿ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ರವರನ್ನು ನೇಮಿಸಲಾಗಿದ್ದು, ಸದರಿ ಆದೇಶದಂತೆ ವಾರ್ಡ್ ಮಟ್ಟದಲ್ಲಿ ಸಾರ್ವಜನಿಕರಿಗೆ ಪ್ರಮುಖವಾದ ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿ ಮತ್ತು ಬೆಸ್ಕಾಂ ವಿಭಾಗ ಹಾಗೂ ವಿದ್ಯುತ್ ವಿಭಾಗ ಬಿಬಿಎಂಪಿ ಹಾಗೂ ಇನ್ನಿತರೆ ಕಲ್ಯಾಣ ಕಾರ್ಯಕ್ರಮಗಳಂತಹ ಹಲವಾರು ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಒದಗಿಸುವ ನಿಟ್ಟಿನಲ್ಲಿ ಮತ್ತು ಪಾಲಿಕೆಯ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿ ಸಭೆಗೆ ಈ ಕೆಳಕಂಡ ಅಧಿಕಾರಿ ವರ್ಗ/ಸದಸ್ಯರು ಮತ್ತು ಸ್ಥಳೀಯ ನಾಗರಿಕರು ಹಾಜರಾಗಿದ್ದರು.

**ಹಾಜರಿದ್ದವರು**

| ಕ್ರಮ ಸಂ | ಸದಸ್ಯರ ಹೆಸರು | ಪದನಾಮ / ವಿಳಾಸ | ಹಾಜರಾತಿ |
|---|---|---|---|
| 1 | ಶ್ರೀ ರವಿ. ಡಿ | ನೋಡೆಲ್ ಅಧಿಕಾರಿಗಳು & ಸಹಾಯಕ ಕಾರ್ಯಪಾಲಕ ಅಭಿಯಂತರರು | ಹಾಜರಿದ್ದರು |
| 2 | ಶ್ರೀ ಮೊಹಮ್ಮದ್ ಅಕ್ರಮ್ | ಕಿರಿಯ ಅಭಿಯಂತರರು, BWSSB | ಹಾಜರಿದ್ದರು |
| 3 | ಶ್ರೀ ರಮೇಶ್. ಡಿ | ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ | ಹಾಜರಿದ್ದರು |
| 4 | ಶ್ರೀ ಲಕ್ಷ್ಮಯ್. ಸಿ | ಸಹಾಯಕ ಅಭಿಯಂತರರು, BWSSB | ಹಾಜರಿದ್ದರು |
| 5 | ಶ್ರೀ ಯತೀಶ್ ಕುಮಾರ್. ಎನ್ | ಕಿರಿಯ ಅಭಿಯಂತರರು, ಬೆಸ್ಕಾಂ | ಹಾಜರಿದ್ದರು |
| 6 | ಶ್ರೀ ದಿಲೀಪ್ ನಾಯಕ್. ಸಿ.ಟಿ | ಕಿರಿಯ ಆರೋಗ್ಯ ಪರಿವೀಕ್ಷಕ | ಹಾಜರಿದ್ದರು |
| 7 | ಶ್ರೀ ರಮೇಶ್. ಎಲ್. | ಮಾಜಿ ಪಾಲಿಕೆ ಸದಸ್ಯರು. | ಹಾಜರಿದ್ದರು |
| 8 | ಶ್ರೀ ಕೆ. ಪರಮೇಶ್ವರ್ ಭಟ್ | ಸ್ಥಳೀಯ ನಿವಾಸಿಗಳು | ಹಾಜರಿದ್ದರು |
| 9 | ಶ್ರೀ ಜಗದೀಶ್ ಮಯ್ಯ | ಸ್ಥಳೀಯ ನಿವಾಸಿಗಳು | ಹಾಜರಿದ್ದರು |
| 10 | ಶ್ರೀ ಗುರುರಾಜ್ ಕೋರ್ವಿ | ಸ್ಥಳೀಯ ನಿವಾಸಿಗಳು | ಹಾಜರಿದ್ದರು |
| 11 | ಶ್ರೀ ಟಿ. ಕೃಷ್ಣಪ್ಪ | ಸ್ಥಳೀಯ ನಿವಾಸಿಗಳು | ಹಾಜರಿದ್ದರು |
| 12 | ಶ್ರೀ ಎಂ. ವಿಜಯ್ ಕುಮಾರ್ | ಸ್ಥಳೀಯ ನಿವಾಸಿಗಳು | ಹಾಜರಿದ್ದರು |
| 13 | ಶ್ರೀ ಶ್ರೀಕಾಂತ್ | ಸ್ಥಳೀಯ ನಿವಾಸಿಗಳು | ಹಾಜರಿದ್ದರು |
| 14 | ಶ್ರೀ ಜಗದೀಶ್. ಕೆ | ಸ್ಥಳೀಯ ನಿವಾಸಿಗಳು | ಹಾಜರಿದ್ದರು. |
| 15 | ಶ್ರೀಮತಿ ತನುಜಾ | ಸ್ಥಳೀಯ ನಿವಾಸಿಗಳು | ಹಾಜರಿದ್ದರು |
| 16 | ಶ್ರೀ ಬಾಲಜಿ | ಸ್ಥಳೀಯ ನಿವಾಸಿಗಳು | ಹಾಜರಿದ್ದರು |

ದಿನಾಂಕ 26.04.2022ರಂದು ಬೆಳಗ್ಗೆ 11.00 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕ ಕುಂದುಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖಾವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

1. <u>ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ:-</u> ಪುಟ್ಟೇನಹಳ್ಳಿ ವಾರ್ಡ್ ನಂ 187ರ ವ್ಯಾಪ್ತಿಯಲ್ಲಿ ಬರುವ ವಿವಿಧ ಬಡಾವಣೆ ಹಾಗೂ ಪ್ರದೇಶಗಳಲ್ಲಿ ಈಗಾಗಲೇ ಒಳಚರಂಡಿ ಮಂಡಳಿ ವತಿಯಿಂದ ಕಾಮಗಾರಿಗಳನ್ನು ನಿರ್ವಹಿಸಿರುತ್ತಾರೆ. ಮುಂದುವರೆದಂತೆ ನಿರ್ವಹಿಸಿದ ಕಾಮಗಾರಿ ಪ್ರದೇಶದಲ್ಲಿ ರಸ್ತೆಯ ಯಥಾಸ್ಥಿತಿಯನ್ನು ಕಾಪಾಡಿಕೊಂಡಿಲ್ಲದಿರುವ ಬಗ್ಗೆ ಸ್ಥಳೀಯರ ದೂರಿನ ಮೇರೆಗೆ ಒಳಚರಂಡಿ ಮಂಡಳಿಗೆ ತುರ್ತಾಗಿ ರಸ್ತೆಗಳನ್ನು ದುರಸ್ಥಿಪಡಿಸಲು ಮತ್ತು ಡಾಂಬರೀಕರಣ ಮಾಡಲು ಸಭೆಯಲ್ಲಿ ಸೂಚಿಸಲಾಯಿತು.

2. <u>ಬೆಸ್ಕಾಂ:-</u> ಪುಟ್ಟೇನಹಳ್ಳಿ ವಾರ್ಡ್ ನಂ 187ರ ವ್ಯಾಪ್ತಿಯಲ್ಲಿ ಬರುವ ವಿವಿಧ ಬಡಾವಣೆ ಹಾಗೂ ಪ್ರದೇಶಗಳಲ್ಲಿ ಯು.ಜಿ ಕೇಬಲ್‌ಗಳನ್ನು ಅಳವಡಿಸಲು ರಸ್ತೆಗಳಲ್ಲಿ ಗುಂಡಿಗಳನ್ನು ತೆಗೆದು ಹಾಗೇಯೇ ಬಿಡಲಾಗಿದೆ ಮತ್ತು ಮರದ ಕೊಂಬೆಗಳನ್ನು ಕತ್ತರಿಸಿ ಸ್ಥಳದಲ್ಲಿಯೇ ಬಿಟ್ಟಿರುವುದಾಗಿ ತಿಳಿಸಿ ಸ್ಥಳೀಯರು ದೂರನ್ನು ನೀಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಶ್ರೀ ಯತೀಶ್‌ಕುಮಾರ್. ಎನ್ ಕಿರಿಯ ಅಭಿಯಂತರರು. ಬೆಸ್ಕಾಂ ರವರು ಸರಿಪಡಿಸುವುದಾಗಿ ತಿಳಿಸಿರುತ್ತಾರೆ ಹಾಗೂ ಶ್ರೀ ಆನಂದ್, ಸಹಾಯಕ ಅಭಿಯಂತರರು ಮತ್ತು ಭೀಮಪ್ಪ, ಕಿರಿಯ ಅಭಿಯಂತರರು ಗೈರು ಹಾಜರಾಗಿರುತ್ತಾರೆ.

3. <u>ಕಾಮಗಾರಿ ಇಲಾಖೆ:-</u> ಪುಟ್ಟೇನಹಳ್ಳಿ ವಾರ್ಡ್ ನಂ 187ರ ವ್ಯಾಪ್ತಿಯಲ್ಲಿ ಬರುವ ವಿವಿಧ ಬಡಾವಣೆ ಹಾಗೂ ಪ್ರದೇಶಗಳಲ್ಲಿ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿರುವುದಾಗಿ ಬಂದಿರುವ ದೂರಿನ ಮೇರೆಗೆ ಮಾತನಾಡುತ್ತಾ ಸದರಿ ವಾರ್ಡ್‌ನಲ್ಲಿ ಸಹಾಯಕ ಅಭಿಯಂತರರು, ಇಲ್ಲದೇ ಇರುವುದರಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಹಾಜರಾಗಲು ತಿಳಿಸಿದ್ದು ಸದರಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮುಖ್ಯ ಅಭಿಯಂತರರ ತುರ್ತು ಸಭೆಗೆ ಹಾಜರಾಗಬೇಕಿದ್ದ ಕಾರಣ ಸಭೆಗೆ ಹಾಜರಾಗಲು ಸಾಧ್ಯವಾಗುವುದಿಲ್ಲ ಎಂದು ದೂರವಾಣಿ ಕರೆ ಮಾಡಿ ಅಧ್ಯಕ್ಷರಿಗೆ ತಿಳಿಸಿರುತ್ತಾರೆ.

   ಮುಂದುವರೆದಂತೆ ಕಾಮಗಾರಿ ಇಲಾಖೆ ವತಿಯಿಂದ ಈಗಾಗಲೇ ಎಲ್ಲಾ ಪ್ರದೇಶಗಳ ರಸ್ತೆ, ಚರಂಡಿ ಮತ್ತು ಪಾದಚಾರಿ ಮಾರ್ಗದ ಕಾಮಗಾರಿಗಳಿಗೆ ಆಯವ್ಯಯ ಪಟ್ಟಿಯನ್ನು ವಿಭಾಗ ಕಛೇರಿಯಲ್ಲಿ ಸಲ್ಲಿಸಿದ್ದು ಸದರಿ ಕಾಮಗಾರಿಗಳಿಗೆ ಅನುಮೋದನೆ ನಂತರ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗುವುದು ಎಂದು ಅಧ್ಯಕ್ಷರು ಸಭೆಯಲ್ಲಿ ತಿಳಿಸಿರುತ್ತಾರೆ.

4. <u>ಕೆರೆ ವಿಭಾಗ:-</u> ಪುಟ್ಟೇನಹಳ್ಳಿ ವಾರ್ಡ್ ನಂ 187ರ ವ್ಯಾಪ್ತಿಯಲ್ಲಿ ಬರುವ ಪುಟ್ಟೇನಹಳ್ಳಿ ಕೆರೆಯ ಅಕ್ಕಪಕ್ಕದ ಜಾಗದಲ್ಲಿ ಘನ ತ್ಯಾಜ್ಯ ವಿಲೇವಾರಿ ಹಾಗೂ ಕೆರೆಯ ನಿರ್ವಹಣೆ ಇಲ್ಲದಿರುವ ಬಗ್ಗೆ ಸ್ಥಳೀಯರು ದೂರನ್ನು ನೀಡಿರುತ್ತಾರೆ.

   <u>ಸದರಿ ವಿಭಾಗದ ಅಧಿಕಾರಿಗಳಾಗಲೀ/ಸಿಬ್ಬಂದಿ ವರ್ಗದವರಾಗಲೀ ಸಭೆಗೆ ಹಾಜರಾಗಿರುವುದಿಲ್ಲ.</u>

5. <u>ಘನ ತ್ಯಾಜ್ಯ ನಿರ್ವಹಣಾ ವಿಭಾಗ:-</u> ಪುಟ್ಟೇನಹಳ್ಳಿ ವಾರ್ಡ್ ನಂ 187ರ ವ್ಯಾಪ್ತಿಯಲ್ಲಿ ಬರುವ ವಿವಿಧ ಪ್ರದೇಶಗಳು ಹಾಗೂ ಬಡಾವಣೆಗಳಲ್ಲಿ ಘನ ತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಗಿರುತ್ತದೆ.

   <u>ಸದರಿ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು</u>

6. <u>ಸಹ ಕಂದಾಯ ಅಧಿಕಾರಿಗಳು:-</u> ಸದರಿ ವಿಭಾಗದ ಅಧಿಕಾರಿಗಳಾಗಲೀ/ಸಿಬ್ಬಂದಿ ವರ್ಗದವರಾಗಲೀ ಸಭೆಗೆ ಹಾಜರಾಗಿರುವುದಿಲ್ಲ.

7. <u>ಕಾನೂನು ಮತ್ತು ಸುವ್ಯವಸ್ಥೆ (ಪೋಲೀಸ್ ಇಲಾಖೆ):-</u> ಸದರಿ ವಿಭಾಗದ ಅಧಿಕಾರಿಗಳಾಗಲೀ/ಸಿಬ್ಬಂದಿ ವರ್ಗದವರಾಗಲೀ ಸಭೆಗೆ ಹಾಜರಾಗಿರುವುದಿಲ್ಲ.

8. <u>ಸಂಚಾರಿ ವಿಭಾಗ:-</u> ಸದರಿ ವಿಭಾಗದ ಅಧಿಕಾರಿಗಳಾಗಲೀ/ಸಿಬ್ಬಂದಿ ವರ್ಗದವರಾಗಲೀ ಸಭೆಗೆ ಹಾಜರಾಗಿರುವುದಿಲ್ಲ.

9. <u>ಬೃಹತ್ ರಸ್ತೆಗಳು ಮತ್ತು ಮೂಲಭೂತ ಸೌಕರ್ಯಗಳು:-</u> ಪುಟ್ಟೇನಹಳ್ಳಿ ವಾರ್ಡ್ ನಂ 187ರ ವ್ಯಾಪ್ತಿಯಲ್ಲಿ ಬರುವ 24ನೇ ಮುಖ್ಯ ರಸ್ತೆಯಲ್ಲಿ ಬರುವ ಬಿಗ್ ಮಾರ್ಕೆಟ್ ಪಕ್ಕದಲ್ಲಿ ರಸ್ತೆಗೆ ಅಡ್ಡಲಾಗಿ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿರುತ್ತಾರೆ ಎಂದು ಸ್ಥಳೀಯರ ದೂರಿನ ಮೇರೆಗೆ ವಿಚಾರಿಸಲಾಗಿ ಸದರಿ ಸ್ವತ್ತು ಶ್ರೀ ಈಶ್ವರ್ ಪ್ರಸಾದ್‌ರವರ ಮಾಲೀಕತ್ವದಲ್ಲಿದ್ದು ಸದರಿರವರು ಟಿ.ಡಿ.ಆರ್‌ನ ಅನುಮೋದನೆ ಅರ್ಜಿಸಲ್ಲಿಸಿರುವುದಾಗಿ ತಿಳಿದು ಬಂದಿರುತ್ತದೆ. ಸದರಿ ವಿಷಯವನ್ನು ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ಸಭೆಯಲ್ಲಿ ತೀರ್ಮಾನಿಸಲಾಯಿತು.

<u>ಸದರಿ ವಿಭಾಗದ ಅಧಿಕಾರಿಗಳಾಗಲೀ/ಸಿಬ್ಬಂದಿ ವರ್ಗದವರಾಗಲೀ ಸಭೆಗೆ ಹಾಜರಾಗಿರುವುದಿಲ್ಲ.</u>

10. <u>ಬೃಹತ್ ನೀರುಗಾಲುವೆ ವಿಭಾಗ:-</u> ಪುಟ್ಟೇನಹಳ್ಳಿ ವಾರ್ಡ್ ನಂ 187ರ ವ್ಯಾಪ್ತಿಯಲ್ಲಿ ಬರುವ ಸಾರಕ್ಕಿ ಕೆರೆಯಿಂದ ಅಷ್ಟಲಕ್ಷ್ಮೀ ಬಡಾವಣೆ, ಅಣ್ಣಯ್ಯರೆಡ್ಡಿ ಬಡಾವಣೆ, ನಂಜುಂಡೇಶ್ವರ ಬಡಾವಣೆಗಳ ಮುಖಾಂತರ ಡಾಲರ್ಸ್ ಬಡಾವಣೆಯವರೆಗೆ ಮಳೆನೀರುಗಾಲುವೆ ಇದ್ದು, ಸದರಿ ಕಾಲುವೆಯು ಈಗಾಗಲೇ ಭರ್ತಿಯಾಗಿದ್ದು ಯಾವುದೇ ಹೂಳೆತ್ತುವ ಕಾಮಗಾರಿಯನ್ನು ನಡೆಸಿರುವುದಿಲ್ಲವೆಂದು ಅಣ್ಣಯ್ಯರೆಡ್ಡಿ ಬಡಾವಣೆಯ ನಿವಾಸಿಗಳು ದೂರನ್ನು ನೀಡಿರುತ್ತಾರೆ.

<u>ಸದರಿ ವಿಭಾಗದ ಅಧಿಕಾರಿಗಳಾಗಲೀ/ಸಿಬ್ಬಂದಿ ವರ್ಗದವರಾಗಲೀ ಸಭೆಗೆ ಹಾಜರಾಗಿರುವುದಿಲ್ಲ.</u>

11. <u>ಅರಣ್ಯ ಇಲಾಖೆ:-</u> ಪುಟ್ಟೇನಹಳ್ಳಿ ವಾರ್ಡ್ ನಂ 187ರ ವ್ಯಾಪ್ತಿಯಲ್ಲಿ ಬರುವ ವಿವಿಧ ಪ್ರದೇಶಗಳಲ್ಲಿ ಈಗಾಗಲೇ ಮರಗಳು ಕೆಲವುಕಡೆ ಬಿದ್ದಿದ್ದು ಸದರಿ ಮರಗಳ ರೆಂಬೆ ಕೊಂಬೆಗಳನ್ನು ಕತ್ತರಿಸಿ ಸ್ಥಳದಲ್ಲಿಯೇ ಬಿಟ್ಟಿರುವುದಾಗಿ ಸ್ಥಳೀಯರು ದೂರು ನೀಡಿರುತ್ತಾರೆ ಹಾಗೂ ಮಳೆಗಾಲ ಹತ್ತಿರ ಬರುತ್ತಿರುವುದರಿಂದ ಕೆಲವು ಮರಗಳು ಬೀಳುವ ಹಂತದಲ್ಲಿದ್ದು ಸದರಿ ಮರಗಳನ್ನು ಗುರುತಿಸಿ ಕ್ರಮಕೈಗೊಳ್ಳಲು ಸಲಹೆಯನ್ನು ಸಭೆಯಲ್ಲಿ ನೀಡಿರುತ್ತಾರೆ.

<u>ಸದರಿ ವಿಭಾಗದ ಅಧಿಕಾರಿಗಳಾಗಲೀ/ಸಿಬ್ಬಂದಿ ವರ್ಗದವರಾಗಲೀ ಸಭೆಗೆ ಹಾಜರಾಗಿರುವುದಿಲ್ಲ.</u>

12. <u>ಆರೋಗ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ:-</u> ಪುಟ್ಟೇನಹಳ್ಳಿ ವಾರ್ಡ್ ನಂ 187ರ ವ್ಯಾಪ್ತಿಯಲ್ಲಿ ಬರುವ ವಿವಿಧ ಪ್ರದೇಶ ಹಾಗೂ ಬಡಾವಣೆಗಳಲ್ಲಿ ಕೋವಿಡ್-19 ಮುಂದುವರೆಯುವ ಪರಿಸ್ಥಿತಿಯಲ್ಲಿದ್ದು ಹಾಗೂ ಸದರಿ ವಾರ್ಡ್‌ನ ಎಲ್ಲಾ ನಾಗರೀಕರು ಕೋವಿಡ್ ಲಸಿಕೆಯನ್ನು ನೀಡುತ್ತಿರುವುದಿಲ್ಲ ಹಾಗೂ ಸದ್ಯಕ್ಕೆ 60 ವರ್ಷ ಮೇಲ್ಪಟ್ಟವರಿಗೆ ಬೂಸ್ಟರ್ ಡೋಸ್, 12 ರಿಂದ 14ವರ್ಷದ ಮಕ್ಕಳಿಗೆ ಕಾರ್ಬಿ ವ್ಯಾಕ್ಸ್ ಮತ್ತು 14 ರಿಂದ 18 ವರ್ಷದವರಿಗೆ ಕೋವ್ಯಾಕ್ಸಿನ್ ನೀಡಲಾಗುತ್ತಿರುತ್ತದೆ. 18 ವರ್ಷ ಮೇಲ್ಪಟ್ಟವರಿಗೆ ಯಾವುದೇ ಬೂಸ್ಟರ್ ಡೋಸ್‌ಅನ್ನು ನೀಡಲಾಗುತ್ತಿಲ್ಲ ಎಂದು ಸಾರ್ವಜನಿಕರು ದೂರನ್ನು ನೀಡಿರುತ್ತಾರೆ. ಈ ಬಗ್ಗೆ ಆರೋಗ್ಯಾಧಿಕಾರಿಗಳೊಂದಿಗೆ ಚರ್ಚಿಸಿ ಮಾಹಿತಿಯನ್ನು ನೀಡಲಾಗುವುದು ಎಂದು ಸಭೆಗೆ ತಿಳಿಸಲಾಯಿತು.

<u>ಸದರಿ ವಿಭಾಗದ ಅಧಿಕಾರಿಗಳಾಗಲೀ/ಸಿಬ್ಬಂದಿ ವರ್ಗದವರಾಗಲೀ ಸಭೆಗೆ ಹಾಜರಾಗಿರುವುದಿಲ್ಲ.</u>

13. <u>ತೋಟಗಾರಿಕೆ ಇಲಾಖೆ ಬೊಮ್ಮನಹಳ್ಳಿ ವಲಯ:-</u> ಪುಟ್ಟೇನಹಳ್ಳಿ ವಾರ್ಡ್ ನಂ 187ರ ವ್ಯಾಪ್ತಿಯಲ್ಲಿ ಬರುವ ನಂಜುಂಡೇಶ್ವರ ಬಡಾವಣೆ ಹಾಗೂ ಪಾಂಡುರಂಗ ಬಡಾವಣೆಯಲ್ಲಿ ಇರುವ ಪಾರ್ಕ್‌ನಲ್ಲಿ ನಿರ್ವಹಣೆಯು ಕುಂಠಿತವಾಗಿರುತ್ತದೆ ಪಾರ್ಕ್‌ನಲ್ಲಿ ಇರುವ ಸಿಬ್ಬಂದಿ ವರ್ಗದವರಿಗೆ ವೇತನವನ್ನು ನೀಡುತ್ತಿರುವುದಿಲ್ಲವೆಂದು ದೂರನ್ನು ನೀಡಿರುತ್ತಾರೆ

ಸದರಿ ವಿಭಾಗದ ಅಧಿಕಾರಿಗಳಾಗಲೀ/ಸಿಬ್ಬಂದಿ ವರ್ಗದವರಾಗಲೀ ಸಭೆಗೆ ಹಾಜರಾಗಿರುವುದಿಲ್ಲ.

14. <u>ವಿದ್ಯುತ್ ವಿಭಾಗ, ದೊಮ್ಮನಹಳ್ಳಿ ವಿಭಾಗ:-</u> ಪುಟ್ಟೇನಹಳ್ಳಿ ವಾರ್ಡ್ ನಂ 187ರ ವ್ಯಾಪ್ತಿಯಲ್ಲಿ ಬರುವ ಬೀದಿ ದೀಪಗಳ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿದೆ ಎಂದು ಸ್ಥಳೀಯರು ತಿಳಿಸಿರುತ್ತಾರೆ.

15. <u>ವೈದ್ಯಾಧಿಕಾರಿಗಳು ಪ್ರಾಣಿ ಮತ್ತು ಪಶುಸಂಗೋಪನಾ ಇಲಾಖೆ:-</u> ಪುಟ್ಟೇನಹಳ್ಳಿ ವಾರ್ಡ್ ನಂ 187ರ ವ್ಯಾಪ್ತಿಯಲ್ಲಿ ಬರುವ ವಿವಿಧ ಪ್ರದೇಶಗಳಲ್ಲಿ ನಾಯಿಗಳ ಹಾವಳಿ ಜಾಸ್ತಿ ಇದ್ದು ಹಾಗೂ ಸದರಿ ರವರಿಗೆ ದೂರವಾಣಿಯಲ್ಲಿಯೂ ಸಹ ಸಿಗುತ್ತಿರುವುದಿಲ್ಲವೆಂದು ಸಾರ್ವಜನಿಕರು ದೂರು ನೀಡಿರುತ್ತಾರೆ.

ಸದರಿ ವಿಭಾಗದ ಅಧಿಕಾರಿಗಳಾಗಲೀ/ಸಿಬ್ಬಂದಿ ವರ್ಗದವರಾಗಲೀ ಸಭೆಗೆ ಹಾಜರಾಗಿರುವುದಿಲ್ಲ

16. <u>ವಾರ್ಡ್ ಮಾರ್ಷಲ್:-</u> ಸದರಿ ವಾರ್ಡ್‌ನ ಮಾರ್ಷಲ್ ಸಭೆಗೆ ಹಾಜರಾಗಿರುವುದಿಲ್ಲ.

17. <u>ಕಲ್ಯಾಣ ಇಲಾಖೆ:-</u> ಸದರಿ ವಿಭಾಗದ ಅಧಿಕಾರಿಗಳಾಗಲೀ/ಸಿಬ್ಬಂದಿ ವರ್ಗದವರಾಗಲೀ ಸಭೆಗೆ ಹಾಜರಾಗಿರುವುದಿಲ್ಲ.

<u>ಸೂಚನೆ:- ಅಧ್ಯಕ್ಷರು/ನೋಡಲ್ ಅಧಿಕಾರಿಗಳು ಮಾತನಾಡುತ್ತಾ ಸದರಿ ಸಭೆಗೆ ಕೆಲವು ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಗೈರುಹಾಜರಾಗಿದ್ದು ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ತಿಳಿಸುತ್ತಾ ತಪ್ಪಿದ್ದಲ್ಲಿ ಕ್ರಮಕೈಗೊಳ್ಳಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿರುತ್ತಾರೆ.</u>

ಅಧ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ/ದೂರುಗಳನ್ನು ದಾಖಲಿಸಲು ವಾರ್ಡ್‌ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು ಬರುವ ದೂರುಗಳನ್ನು ಆದ್ಯತೆಯ ಮೇಲೆ ಕ್ರಮವಹಿಸುವಂತೆ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಮಾನ್ಯ ಅಧ್ಯಕ್ಷರು, ವಾರ್ಡ್ ನಂ 187ರವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು
ವಾರ್ಡ್ ನಂ 187 ಪುಟ್ಟೇನಹಳ್ಳಿ